ಅ) ಬೆಳಗಾಂವ್ ಜಿಲ್ಲೆಯಲ್ಲಿ ಎಷ್ಟು ಪದವಿ ಮಹಾವಿದ್ಯಾಲಯಗಳು(ಡಿಗ್ರಿ ಕಾಲೇಜು) ಇರುತ್ತವೆ;

ಆ) ಅವುಗಳಲ್ಲಿ ಎಷ್ಟು ಹುದ್ದೆಗಳು ಮಂಜೂರಿ ಇರುತ್ತವೆ? ಮತ್ತು ಮಂಜೂರಾದ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುತ್ತವೆ? ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ.

ಇ) ಬೆಳಗಾಂವ್ ಜಿಲ್ಲೆಯ ಪದವಿ ಕಾಲೇಜುಗಳಲ್ಲಿ ಕ್ಲಾಸ್-ಡಿ ವರ್ಗದ ಹುದ್ದೆಗಳು ಎಷ್ಟು ಹುದ್ದೆಗಳು ಖಾಲಿ ಇರುವುವು? ಮತ್ತು ಎಂದಿನಿಂದ ಖಾಲಿ ಇರುವುವು.

ಈ) ಈ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ತುಂಬಬೇಕಾದ ಕಾಲಕ್ಕೆ ಅಥವಾ ಗುತ್ತಿಗೆದಾರರನ್ನು ಬೇರೆ ಇಲಾಖೆಯಿಂದ (ಡಿವಿಜನ್) ಖಾಯಂ ಮಾಡಿ ಈ ಹುದ್ದೆಗಳನ್ನು ತುಂಬುವ ಕಾಲಕ್ಕೆ ಅದನ್ನು ವಿಭಾಗಾಧಿಕಾರಿಗಳ ಕಡೆಗೆ ತುಂಬಲು ಕೋರಲಾಗುವುದೇ.

ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):

ಅ) 03.

ಆ) ಸದರಿ ಕಾಲೇಜುಗಳಲ್ಲಿ 23 ಬೋಧಕರ ಹಾಗೂ 'ಡಿ' ಗ್ರೂಪ್ ಸೇರಿದಂತೆ 15 ಬೋಧಕೇತರ ಹುದ್ದೆಗಳು ಮಂಜೂರಾತಿ ಆಗಿದ್ದು, 1 ಬೋಧಕರ ಹುದ್ದೆ ಹಾಗೂ 7 ಬೋಧಕೇತರ ಹುದ್ದೆ ಖಾಲಿ ಇವೆ.

ಖಾಲಿ ಇರುವ ಬೋಧಕ ಹುದ್ದೆಗಳನ್ನು ಸೂಕ್ತ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಆರ್ಥಿಕ ಮಿತವ್ಯಯ ಆದೇಶ ಇರುವುದರಿಂದ ಬೋಧಕೇತರ ಹುದ್ದೆಗಳನ್ನು ತುಂಬಲಾಗುತ್ತಿಲ್ಲ.

ಇ) 02, ಕಾಲೇಜುಗಳು ಪ್ರಾರಂಭವಾದಾಗಿನಿಂದಲೂ ಖಾಲಿ ಇವೆ.

ಈ) ಹೌದು, ವಿಭಾಗಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು.

ಬೈಲ್‌ಹೊಂಗಲ ತಾಲ್ಲೂಕು ವಣ್ಣೂರು ಗ್ರಾಮದ ಸರ್ಕಾರಿ ಕಾಂಪೋಜಿಟ್ ಜೂನಿಯರ್ ಕಾಲೇಜಿನ ಬಗ್ಗೆ.

2358(2944)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲ್‌ಹೊಂಗಲ): ಮಾನ್ಯ ಪ್ರಾಥಮಿಕ

ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ್ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎಷ್ಟು ಹುದ್ದೆಗಳು ಮಂಜೂರು ಆಗಿರುತ್ತವೆ. ಅವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುತ್ತವೆ? ಮತ್ತು ಅವುಗಳನ್ನು ಎಂದಿನಿಂದ ತುಂಬಲಾಗುವುದು.

ಆ) ಈ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಕ್ಲಾಸ್-ಡಿ ವರ್ಗದ ನೌಕರ ಕೆಲಸವನ್ನು ಮಾಡದೇ ಸಂಬಳ ಪಡೆಯುತ್ತಿರುವ ಸಂಗತಿ ನಿಜವೇ? ಹಾಗಿದ್ದಲ್ಲಿ ಆತನು ಅಲ್ಲಿ ಎಂದಿನಿಂದ ಕೆಲಸ ಮಾಡುತ್ತಿಲ್ಲ? ಒಂದು ವೇಳೆ ಆತನನ್ನು ಬೇರೆಡೆಗೆ ನಿಯೋಜನೆ ಮಾಡಿದರೂ ಸಹ ಅಲ್ಲಿಯೂ ಸಹ ಕೆಲಸ ಮಾಡದೇ ಸಂಬಳ ಪಡೆಯುತ್ತರುವ ಸಂಗತಿ ನಿಜವೇ?

ಇ) ಕ್ಲಾಸ್-3 ನೌಕರ ವಣ್ಣೂರ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಒಬ್ಬನೂ ಇಲ್ಲದೆ ಇರುವುದರಿಂದ ಕೆಲಸಕ್ಕೆ ತುಂಬಾ ತೊಂದರೆಯಾಗುತ್ತಿರುವ ಸಂಗತಿ ಮೇಲಧಿಕಾರಿಗಳ ಗಮನಕ್ಕೆ ಬಂದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಇರುವ ಸಂಗತಿ ನಿಜವೇ? ಹಾಗಿದ್ದಲ್ಲಿ ಈ ತೊಂದರೆಯನ್ನು ಹೋಗಲಾಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಮಂಜೂರಾದ ಹುದ್ದೆಗಳು:

ಪ್ರಿನ್ಸಿಪಾಲ್ - 1
ಉಪನ್ಯಾಸಕರು - 6

ಇತಿಹಾಸ, ಅರ್ಥಶಾಸ್ತ್ರ ಹಾಗೂ ಸಮಾಜಶಾಸ್ತ್ರ ಹುದ್ದೆಗಳಲ್ಲಿ ಉಪನ್ಯಾಸಕರು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಖಾಲಿ ಇರುವ ಕನ್ನಡ ಉಪನ್ಯಾಸಕ ಹುದ್ದೆಯನ್ನು ಮುಂದಿನ ನೇಮಕಾತಿಯಲ್ಲಿ ತುಂಬಲಾಗುವುದು. ಈ ಕಾಲೇಜಿನ ಎಲ್ಲಾ ಹುದ್ದೆಗಳಿಗೂ ಪೂರ್ಣಕಾಲಿಕ ಉಪನ್ಯಾಸಕರುಗಳ ಅಗತ್ಯ ಇರುವುದಿಲ್ಲ.

ಆ) ಈ ಕಾಲೇಜಿನ ಪದವಿ ಪೂರ್ವ ವಿಭಾಗಕ್ಕೆ ಗ್ರೂಪ್ ಡಿ ಹುದ್ದೆ ಮಂಜೂರು ಆಗಿರುವುದಿಲ್ಲ.

ಇ) ಗ್ರೂಪ್ ಡಿ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿ ಇರುತ್ತದೆ.